ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಬಿ.ಬಿ.ಎಂ.ಪಿ. ಅಧಿಕಾರಿಗಳ ವೇತನದಲ್ಲಿ ಸಾಮಾನ್ಯ ಭವಿಷ್ಯ ನಿಧಿಯ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

1260 (1433) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2010 ರಿಂದ 2018 ರ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆಯ ಮೇರೆಗೆ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸಿದ ಅಭಿಯಂತರರುಗಳು, ನೌಕರರುಗಳು ಹಾಗೂ ಅಧಿಕಾರಿಗಳ ವೇತನದಲ್ಲಿ ಸಾಮಾನ್ಯ ಭವಿಷ್ಯನಿಧಿ ಬಾಬ್ತು ಕಟಾವು ಮಾಡಿದ ಮೊತ್ತವನ್ನು ಸಂಬಂಧಪಟ್ಟವರ ಖಾತೆಗೆ ಜಮಾ ಮಾಡಿರುವ ಸಂಪೂರ್ಣ ವಿವರವನ್ನು ನೀಡುವುದು ;

(ಆ) ಸದರಿ ಅವಧಿಯಲ್ಲಿ ಅಭಿಯಂತರುಗಳು, ನೌಕರರುಗಳು ಹಾಗೂ ಅಧಿಕಾರಿಗಳ ವೇತನದಲ್ಲಿ ಸಾಮಾನ್ಯ ಭವಿಷ್ಯನಿಧಿ ಬಾಬ್ತು ಕಟಾವು ಮಾಡಿದ ಮೊತ್ತವನ್ನು ಸಂಬಂಧಪಟ್ಟವರ ಖಾತೆಗೆ ಜಮಾ ಮಾಡಿರುವ ಮತ್ತು ಜಮಾ ಮಾಡದಿರುವ ವಿವರ ಒದಗಿಸುವುದು; (ವಿವರಗಳ ಪ್ರತಿ ಅಧಿಕಾರಿಯ ಹೆಸರು, ಪದನಾಮ ಹಾಗೂ ಖಾತೆಗೆ ಜಮಾ ಮಾಡಿರುವ ಮತ್ತು ಜಮಾ ಮಾಡದಿರುವ ವಿವರ ದಿನಾಂಕದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ವಿಷಯವನ್ನು ನಿರ್ವಹಿಸುತ್ತಿದ್ದ ವಿಷಯ ನಿರ್ವಾಹಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿವರ ಮತ್ತು ಕರ್ತವ್ಯ ನಿರ್ಲಕ್ಷ್ಯ ಮಾಡಿದ್ದಲ್ಲಿ ಅಂತವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರ ನೀಡುವುದು ;

(ಈ) ನೊಂದ ಅಭಿಯಂತರರುಗಳು, ನೌಕರರುಗಳು ಹಾಗೂ ಅಧಿಕಾರಿಗಳು ಈವರೆಗೆ ಸಲ್ಲಿಸಿರುವ ಮನವಿಗಳ ವಿವರ ಮತ್ತು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರ ನೀಡುವುದು ?